ವಂತ್ತು ತುಂತುರು ನೀರಾವರಿ ಸಲಕರಣೆಗಳನ್ನು ಅಳವಡಿಸಿ–ನೀರಾವರಿ ಸೌಲಭ್ಯ ಒದಗಿಸಲಾಗುವುದು. ಒಂದು ವೇಳೆ ಭಾವಿಗಳು ಸ್ವಚ್ಛವಾದ ನಂತರ ನೀರಾವರಿಗೆ ಯೋಗ್ಯವಿಲ್ಲವೆಂದು ಕಂಡು ಬಂದಲ್ಲಿ ಸದರಿ ಯೋಜನೆಗಳನ್ನು ಕೈಬಿಡಲಾಗುವುದು ಅನಿವಾರ್ಯವಾಗಬಹುದು.

ರೋಣ ತಾಲ್ಲೂಕಿನಲ್ಲಿ ಕರ್ನಾಟಕ ಹಾಲು ಉತ್ಪಾದಕರ ಮಹಾ ಮಂಡಳಿಯ ಕಾರ್ಯಗಳ ಬಗ್ಗೆ

೧೯೨೯. ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ),–– ಮಾನ್ಯ ಪಶು ಸಂಗೋಪನಾ ಹಾಗೂ ಪಶುವೈದ್ಯ ಸೇವೆಗಳ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾರವಾಡ ಜಿಲ್ಲೆ ರೋಣ ತಾಲ್ಲೂಕಿನಲ್ಲಿ ಹೈನೋದ್ಯಮ ಅಭಿವೃದ್ಧಿಗಾಗಿ ಆಪರೇಶನ್ ಫ್ಲಡ್–೨ ಯೋಜನೆಯಡಿಯಲ್ಲಿ ಯಾವ ಕಾರ್ಯಕ್ರಮಗಳನ್ನು ಪಮ್ಮಿಕೊಳ್ಳಲಾಗಿದೆ ?

ಆ) ಇಲ್ಲಿಯವರೆಗೆ ಎಷ್ಟು ಹಾಲು ಉತ್ಪಾದಕರ ಸಂಘಗಳನ್ನು ಪ್ರಾರಂಭಿಸಲಾಗಿದೆ. ಹಾಗೂ ಈ ಯೋಜನೆಯಿಂದ ಪ್ರಯೋಜನ ಪಡೆದವರ ಸಂಖ್ಯೆ ಎಷ್ಟು ?

ಶ್ರೀ ಸಿದ್ದರಾಮಯ್ಯ (ಪಶು ಸಂಗೋಪನೆ ಮತ್ತು ಪಶು ವೈದ್ಯ ಮಂತ್ರಿಗಳು).—

ಅ) ಈ ತಾಲ್ಲೂಕಿನಲ್ಲಿ ಹಾಲಿನ ಸಾಮರ್ಥ್ಯದ ಬಗ್ಗೆ ಸವಿವರವಾದ ಅಧ್ಯಯನವನ್ನು ನಡೆಸಲು ವುದಕ್ಕಾಗಿ ಕರ್ನಾಟಕ ಹಾಲು ಮಹಾಮಂಡಳಿಯು ಕ್ರಮ ಕೈಗೊಂಡಿದೆ.

ಆ) ೧) ಇಲ್ಲಿಯವರೆಗೆ ಐದು ಸಹಕಾರಿ ಸಂಘಗಳನ್ನು ಸ್ಥಾಪಿಸಲಾಗಿದೆ. ಅವು ಕಾರ್ಯಾಚರಣೆಯಲ್ಲಿವೆ.

೨) ಫೆಬ್ರುವರಿ ೧೯೮೬ರ ಅಂತ್ಯದವರೆಗೆ ೩೧೩ ಸದಸ್ಯರು ಹಾಲು ಉತ್ಪಾದಕರ ಸಹಕಾರಿ ಸಂಘ ಸದಸ್ಯತ್ವ ಹೊಂದಿದ್ದು ಈ ಯೋಜನೆಯಿಂದ ಲಾಭ ಪಡೆಯುತ್ತಿರುವರು.

ಗ್ರಾಮಾಂತರ ಪ್ರದೇಶಗಳಲ್ಲಿ ಶಾಲಾ ಕಟ್ಟಡಗಳನ್ನು ಕಟ್ಟಿಸುವ ಬಗ್ಗೆ.

೧೫೬೬. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್. ––ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗ್ರಾಮಾಂತರ ಪ್ರದೇಶಗಳಲ್ಲಿ ಶಾಲಾ ಕಟ್ಟಡಗಳನ್ನು ಕಟ್ಟಿಸಲು ಸರ್ಕಾರದಿಂದ ಕೊಡುತ್ತಿರುವ ಮಂತಿಗೆಯನ್ನು ಹೆಚ್ಚಿಸಲಾಗಿದೆಯೇ ?

ಆ) ಹಾಗಿದ್ದಲ್ಲಿ, ರಾಷ್ಟ್ರೀಯ ಗ್ರಾಮಾಂತರ ಉದ್ಯೋಗ ಕಾರ್ಯಕ್ರಮ ಯೋಜನೆಗೆ ಈಗ ಒದಗಿಸಿರುವ ಮೊತ್ತವೆಷ್ಟು ?

ಇ) ಆಥಣಿ ಮತ್ತು ಕಾಗವಾಡ ಕ್ಷೇತ್ರಗಳಲ್ಲಿ ಈ ಯೋಜನೆಯಲ್ಲಿ ಎಷ್ಟು ಕಟ್ಟಡಗಳಿಗೆ ಅನುದಾನ ಕೊಡಲಾಗಿದೆ?

ಶ್ರೀ ಎಂ. ರಘುಪತಿ(ಶಿಕ್ಷಣ ಮಂತ್ರಿಗಳು).—

ಅ) ಇಲ್ಲ.

ಆ) ಆಥಣಿ ತಾಲ್ಲೂಕಿಗೆ ಕೊಟ್ಟ ಮೊತ್ತ ೧೯೮೩–೮೪ನೇ ಸಾಲಿನಲ್ಲಿ ರೂ. ೨,೪೨,೧೨೬.೦೦ ೧೯೮೪–೮೫ನೇ ಸಾಲಿಗೆ ಕೊಟ್ಟಿಲ್ಲ.

ಇ) ೧೯೮೧–೮೨ನೇ ಸಾಲಿನಲ್ಲಿ — ೬
೧೯೮೨–೮೩ನೇ ಸಾಲಿನಲ್ಲಿ — ೩
೧೯೮೩–೮೪ನೇ ಸಾಲಿನಲ್ಲಿ — ೨
೧೯೮೪–೮೫ನೇ ಸಾಲಿನಲ್ಲಿ — ಇಲ್ಲಾ